ಚಿತ್ರದ ಒಂದು ಸನ್ನಿವೇಶದಲ್ಲಿ ನಾಯಕ–ನಾಯಕಿಯ ಸಂಭಾಷಣೆಯಲ್ಲೇ ಜಾತಿ ಸಂಘರ್ಷ ಢಾಳಾಗಿ ವ್ಯಕ್ತವಾಗುತ್ತದೆ. ಬಹುತೇಕ ತಮಿಳು, ತೆಲುಗು ಚಿತ್ರಗಳ ಕಚ್ಚಾ ಮಾದರಿಯನ್ನು ಈ ಸಿನಿಮಾ ಮೀರುವುದು ಇಂಥ ವಿಷಯದಲ್ಲೇ. ಹೊಡೆದಾಡುವ ಸನ್ನಿವೇಶ ನಿರ್ಮಾಣವಾದರೂ ನಾಯಕ ಮಾಮೂಲಿ ಕಾದಾಟಕ್ಕೆ ಇಳಿಯದೆ ತನ್ನ ಜಾಣತನವನ್ನೇ ನೆಚ್ಚಿಕೊಳ್ಳುವ ರೀತಿ ಅನನ್ಯ. ಅತಿ ಕಡಿಮೆ ಕನ್ನಡ, ಅಪರೂಪಕ್ಕೆ ತುಳು, ಬಹುತೇಕ ತೆಲುಗು ಮಾತನಾಡುವ ಪಾತ್ರಗಳಿವೆ. ಇನ್ನಷ್ಟು ಕನ್ನಡ ಸಂಸ್ಕೃತಿಯನ್ನು ಚಿತ್ರದಲ್ಲಿ ತರಲು ಸಾಧ್ಯವಿತ್ತು. ಅದನ್ನ ತಂದೂ ತೆಲುಗು ಸಿನಿಮಾ ಜಾಯಮಾನವನ್ನು ಉಳಿಸಿಕೊಳ್ಳಬಹುದಿತ್ತು.

ಅಲ್ಲಲ್ಲಿ ಮಸಾಲೆ ಚಿತ್ರದಂತೆ ಕಾಣುವ 'ಅರ್ಜುನ್ ರೆಡ್ಡಿ', ಹಲವು ದೃಶ್ಯಗಳಲ್ಲಿ ಸೂಪರ್ ರಿಯಲಿಸ್ಟಿಕ್ ಆಗಿಬಿಡುತ್ತದೆ. ನಾಯಕ, ನಾಯಕಿಯ ನಡುವಿನ ರಸಮಯ ಕ್ಷಣಗಳನ್ನೂ ಅದಕ್ಕೆ ಉದಾಹರಣೆಯಾಗಿ ಕೊಡಬಹುದು. ಅವನು ಕುಡಿಯುವ ಬಗೆ, ಮಾದಕ ದ್ರವ್ಯಕ್ಕೆ ಶರಣಾಗುವ ರೀತಿ ತೋರಿಸಿರುವುದರಲ್ಲೂ ಸೂಪರ್ ರಿಯಲಿಸ್ಟಿಕ್ ಧೋರಣೆ ಇದೆ.

ಸಿನಿಮಾದಲ್ಲಿನ ಪಾತ್ರಗಳನ್ನು ಲೆಕ್ಕ ಹಾಕಿದರೆ ಅಚ್ಚರಿಯಾಗುತ್ತದೆ. ಡೀನ್, ಮೇಡಂ, ಕ್ಲರ್ಕ್, ಆಪ್ತಸ್ನೇಹಿತ, ಕಾಲೇಜಿನ ಸೀನಿಯರ್, ಇನ್ನೂ ಇಬ್ಬರು ಸಹಪಾಠಿಗಳು, ರ್‍ಯಾಗಿಂಗ್ ಮಾಡುವ ಹುಡುಗಿ, ಆಪ್ತಸ್ನೇಹಿತನ ಅಪ್ಪ, ನಾಯಕನ ಅಪ್ಪ–ಅಮ್ಮ, ಅಣ್ಣ–ಅತ್ತಿಗೆ, ಅಜ್ಜಿ, ನಾಯಕಿಯ ಅಪ್ಪ–ಅಮ್ಮ, ಅಕ್ಕ–ತಮ್ಮ, ಆಸ್ಪತ್ರೆಯ ಮಾಲೀಕ, ನರ್ಸ್, ಹೆಡ್ ನರ್ಸ್, ಮನೆಗೆಲಸದವಳು, ನಾಯಕಿಯ ಹೆಸರನ್ನು ಇಟ್ಟು ನಾಯಕ ಸಾಕುವ ಮುದ್ದಿನ ನಾಯಿ, ವಕೀಲ, ಜಡ್ಜ್, ನಾಯಕಿಯ ಪೋಷಕಿಯಾಗುವ ಮಹಾತಾಯಿ, ನಾಯಕಿಯ ಹೊಟ್ಟೆಯಲ್ಲಿ ಬೆಳೆಯುವ ಮಗು... ಈ ಯಾವ ಪಾತ್ರಗಳೂ ಸಿನಿಮಾದಲ್ಲಿ ಅನಗತ್ಯ ಎಂದು ಅನಿಸುವುದೇ ಇಲ್ಲ.

ನಾಯಕನ ಹದ ತಪ್ಪಿದ ಬದುಕಿಗೆ ಸಾಕ್ಷಿಯಾಗುತ್ತಾ, ಅಡಿಗಡಿಗೂ ಅವನನ್ನು ಪ್ರಶ್ನಿಸುವ ಆಪ್ತಸ್ನೇಹಿತನ ಪಾತ್ರ 'ಕಾಮಿಕ್ ರಿಲೀಫ್' ಆಗಿಯೂ ಪ್ರಕಟಗೊಂಡಿರುವುದರಲ್ಲಿ ನಿರ್ದೇಶಕರ ಕುಸುರಿತನವಿದೆ.

ಎಷ್ಟೆಲ್ಲ ಹೋಂವರ್ಕ್ ಮಾಡಿದ ಮೇಲೂ ಸಿನಿಮಾದಲ್ಲಿ ಎರಡು ದೃಶ್ಯಗಳಲ್ಲಿ ಮಾನ್ಯತೆ ಕಳೆದುಕೊಂಡ ಹಳೆಯ ನೋಟುಗಳು ಕಾಣುತ್ತವೆ.

ನಾಯಕ ವಿಜಯ್ ದೇವರಕೊಂಡ ಅವರ ವೃತ್ತಿಬದುಕಿನಲ್ಲಿ ಇದು ಮರೆಯಲಾಗದ ಸಿನಿಮಾ. ಹಲವು ಭಾವ ಹಾಗೂ ತುಮುಲಗಳನ್ನು ಒಳಗೊಂಡ ಸಂಕೀರ್ಣ ಪಾತ್ರವನ್ನು ಅವರು ಆವಾಹಿಸಿಕೊಂಡಿದ್ದಾರೆ. ಸ್ಫುರದ್ರೂಪಿ ನಾಯಕನಾದ ಅವರ ಕಣ್ಣುಗಳ ತೀಕ್ಷ್ಣತೆಯನ್ನು ನಿರ್ದೇಶಕರು ಚೆನ್ನಾಗಿ ದುಡಿಸಿಕೊಂಡಿದ್ದಾರೆ. ಮೊದಲ ಚಿತ್ರದಲ್ಲೇ ನಾಯಕಿ ಶಾಲಿನಿ ಪಾಂಡೆ ಸ್ನಿಗ್ಧ ನಗುವಿನಿಂದ ಕಾಡುತ್ತಾರೆ. ನಾಯಕನ ಪಾತ್ರದಷ್ಟು 'ದರ್ಶನ' ಅವರ ಪಾತ್ರಕ್ಕೆ ಇಲ್ಲವಾದರೂ, ಸಂಘರ್ಷದ ದೃಷ್ಟಿಯಿಂದ ತೂಕದ ನಾಯಕಿ ಅವರು. ನಗು, ಅಳುವಿನಿಂದ ಹಿಡಿದು ತುಟಿ ಬಟ್ಟಲನ್ನು ಒಡ್ಡಿಕೊಳ್ಳುವವರೆಗೆ ಯಾವ ವಿಷಯದಲ್ಲೂ ಅವರು ಜುಗ್ಗರಾಗಿಲ್ಲ. ನಾಯಕನ ಸ್ನೇಹಿತನ ಪಾತ್ರದಲ್ಲಿ ರಾಹುಲ್ ರಾಮಕೃಷ್ಣ ಹೆಚ್ಚು ಕಾಲ ಕಾಡುತ್ತಾರೆ. ಹಿರಿಯ ನಟಿ ಕಾಂಚನಾ ಅಜ್ಜಿಯ ಪಾತ್ರವನ್ನ ನಿಭಾಯಿಸಿರುವ ರೀತಿಯೂ ಮೆಚ್ಚುಗೆ ಸಲ್ಲಬೇಕು. ಆಧುನಿಕ ಮನಸ್ಸುಗಳನ್ನು ಅರ್ಥ ಮಾಡಿಕೊಳ್ಳುವಷ್ಟು ಮಾಗಿದ ಪಾತ್ರ ಅವರದ್ದು. 'ನೋವು ಅನುಭವಿಸುವುದು ತೀರಾ ಖಾಸಗಿ. ಅದನ್ನು ಅವನು ಅನುಭವಿಸಲಿ ಬಿಡು' ಎಂದು ನಾಯಕನ